





https://drive.google.com/file/d/14UaAN_ORbDrNbaSQnOCHuh8BSFy9coNS/view?usp=sharing

## ಕೃತಜ್ಞತೆ

ಪಠ್ಯ : NPVTG Federation, Churmuri Collective, Aditi, Neera
ಚಿತ್ರಗಳು: NPVTG Federation, Churmuri Collective, Aditi, Neera
ಕನ್ನಡ ಭಾಷಾಂತರ: ಡಾ॥ ಕೆ.ವಿ. ಪ್ರಭಾಕರ
ಪ್ರಕಟಣೆ: ವಸುಂಧರ
ವಿಶೇಷ ಸ್ಮರಣೆ: ಪುಷ್ಪಾಂಜಲಿ ಮತ್ತು ದೀಪನ್

ನಾವು ಯಾವುದೇ ಭಾಷೆಯಲ್ಲಿ ಈ ಪುಸ್ತಕದ ಭಾಷಾಂತರವನ್ನು ಸ್ವಾಗತಿಸುತ್ತೇವೆ.


ನಮ್ಮ ಸಂಪರ್ಕಕ್ಕೆ: npvtgnilgiri@gmail.com



https://www.fra.org.in/
www.twitter.com/forestrightsact



All rights reserved. No part of this publication may be reproduced, stored in a retrieval system, or transmitted, in any form or by any means, without the prior written permission of the authors, or as expressly permitted by law, or under terms agreed with the appropriate reprographic rights organizations.

Inquiries concerning reproduction outside the scope of the above should be sent to the publisher.
It is a creative commons publication. Information from the book can be reproduced through print and digital formats for non-commercial use or educational purposes. Reproductions of the book must be released under the same licence as the original. Please attribute (CC-BY-NC-SA) whenever the information is used.




## ಲೇಖಕರ ಮಾತು

ನಾವು ಈ ಪುಸ್ತಕವನ್ನು ಮುಖ್ಯವಾಗಿ ನಮ್ಮದೇ ಸಮುದಾಯಗಳಿಗೆ ಉಪಯುಕ್ತ ಸಾದನವಾಗಲಿ ಎಂದು ಮಾಡಿದೆವು. ನಮ್ಮನ್ನು ನೀವು ಪಣಿಯರು, ಕಾಟುನಾಯ್ಕರು, ಬೆಟ್ಟಕುರುಬರು, ಇರುಳರು, ಕೋಟರು, ಜೇನುಕುರುಬರು, ಹಾಲುಕುರುಬರು, ತೋಡರು, ಕಸವರು, ಮಲ್ಲಕುರುಬರು ಮುಂತಾದ ಸಮುದಾಯಗಳಲ್ಲಿ ಕಾಣುವಿರಿ.

ಈ ಪುಸ್ತಕದ ಕತೆಯನ್ನು ನಮ್ಮ ಹಿರಿಯರು ನಮಗೆ ಹೇಳಿದ ನಮ್ಮದೇ ಇತಿಹಾಸದೊಂದಿಗೆ 2006ರ ಅರಣ್ಯ ಹಕ್ಕುಗಳ ಕಾಯಿದೆಯ ಕುರಿತ ಹೊಸ ಮಾಹಿತಿಯನ್ನು ಬೆರೆಸಿ ಹೆಣೆಯಲಾಗಿದೆ.

ನಮ್ಮ ಸಮುದಾಯಕ್ಕೆ ಹೊರಗಿನವರು ಕೂಡ ಇದನ್ನು ಬಳಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾವು ಆಶಿಸುತ್ತೇವೆ. ಅರಣ್ಯ ಹಕ್ಕುಗಳ ಕಾಯಿದೆ 2006 ಕೇವಲ ಆದಿವಾಸಿಗಳಿಗೆ ಮಾತ್ರವಲ್ಲ, ಇದು ಕಾಡಿನಲ್ಲಿ ನೆಲೆಕಂಡುಕೊಂಡಿರುವ ಎಲ್ಲ ಜನರಿಗೆ ಸಂಬಂಧಿಸಿದ್ದಾಗಿದೆ. ಹೀಗೆ, ಇಲ್ಲಿ ನಡೆಯುವ ಕತೆಗಳು, ದಕ್ಷಿಣ ಭಾರತದ ನೀಲಗಿರಿ ಬೆಟ್ಟಗಳಲ್ಲಿ ನಡೆಯುತ್ತಾ ಹೋದರು, ಅದು ಭಾರತದ ಉದ್ದಗಲದಲ್ಲಿ, ಜಗತ್ತಿನ ಯಾವುದೇ ಭಾಗದಲ್ಲಿರುವ ಅರಣ್ಯದ ಕತೆಯಾಗಬಹುದು.

ಈ ಪುಸ್ತಕವನ್ನು ಮಾಡುವಾಗ, ನಾವು ಒಂದು ಕತೆ ಮತ್ತು ಅದನ್ನು ಹೇಗೆ ಹೇಳಬೇಕೆಂದು ನಿರ್ಧರಿಸಿದೆವು. ನಮ್ಮ ಯೋಚನೆಗಳನ್ನು ವಿನಿಮಯ ಮಾಡಿಕೊಳ್ಳಲು, ಚಿತ್ರಗಳು, ಭಾವಚಿತ್ರಗಳನ್ನು ಹಂಚಿಕೊಳ್ಳಲು ಒಂದು ವಾಟ್ಸ್ಆ್ಯಫ್ ಗ್ರೂಪ್ ಮಾಡಿಕೊಂಡೆವು. ಇಲ್ಲಿ ಮೂಡಿಬಂದಿರುವ ಚಿತ್ರಗಳನ್ನು ಹಾಗೆ ನಡೆಸಿದ ಚರ್ಚೆಯ ಆಧಾರದ ಮೇಲೆ ರಚಿಸಲಾಗಿದೆ. ಅದಕ್ಕೆ ಸರಿಹೊಂದುವ ಪಠ್ಯಕೂಡ ಸಿದ್ಧವಾಯ್ತು.


ಈ ಪುಸ್ತಕದ ವಿನ್ಯಾಸ, ಇದರ ಭಾಷಾಂತರ ಮತ್ತು ಪರಿಷ್ಕರಣೆಯಲ್ಲಿ ಕೈಜೋಡಿಸಿದ ನಮ್ಮ ಸ್ನೇಹಿತರು ಮತ್ತು ಹಿತೈಷಿಗಳಿಗೆ ನಾವು ಆಭಾರಿಯಾಗಿದ್ದೇವೆ.


ಸಹೃದಯ ಓದುಗರು, ಈ ಮೂಲಕ ಅರಣ್ಯ ಹಕ್ಕುಗಳ ಕಾಯಿದೆಯನ್ನು ಇನ್ನಷ್ಟು ಆಳವಾಗಿ ಅಭ್ಯಾಸ ಮಾಡಿ ಅರಣ್ಯ ಹಕ್ಕುಗಳಿಗೆ ಸಿಕ್ಕಬೇಕಾದ ಮಾನ್ಯತೆಯನ್ನು ಗಳಿಸಿಕೊಡುತ್ತಾರೆ ಎಂದು ಆಶಿಸುತ್ತೇವೆ.

ಧನ್ಯವಾದಗಳು!


ಅರಣ್ಯ ಹಕ್ಕುಗಳು ಎಂದರೇನು?
ನಾವು ನಮ್ಮ ನೆಲವನ್ನು ಹೇಗೆ ಕಳೆದು ಕೊಂಡೆವು?
ನಮ್ಮ ಇತಿಹಾಸ ಏನು?
ನಾವು ಶುರು ಮಾಡುವುದು ಎಲ್ಲಿಂದ?
ನಾವು ನಮ್ಮ ನೆಲವನ್ನು ಮರಳಿ ಪಡೆಯುವುದು ಹೇಗೆ?


ಅವ್ವಾ, ಅವ್ವಾ ! ನಾನೊಂದು ಸುಂದರ ಕನಸು ಕಂಡೆ !
ಸಮೃದ್ಧ, ಹಸಿರು ಮೈತುಂಬಿದ ಒಂದು ಕಾಡಿನಲ್ಲಿ ನಾವಿದ್ದೆವು. ರೆಕ್ಕೆ ಬಿಚ್ಚಿ ಹಾರುವ ಹಕ್ಕಿಗಳು, ಹರಿಯುವ ಝರಿಗಳು ಲಾಸ್ಯವಾಡುವುದನ್ನು ಕಂಡೆ, ಒಬ್ಬನೇ ಒಬ್ಬ ಅರಣ್ಯ ರಕ್ಷಕನನ್ನು ನಾನು ಕಾಣಲಿಲ್ಲ !
ಹಣಬೆ, ಔಷಧಿ ಮೂಲಿಕೆಗಳು, ಹಣ್ಣುಗಳು, ಮತ್ತು ಬೀಜಗಳನ್ನು ನಾವು ಸಂಗ್ರಹಿಸಿದೆವು.
ಅವ್ವ, ನಾವು ನೋಡಿದ್ದನ್ನು ನೀನೂ ಕಂಡೆಯಾ?
ಮಗಳೇ ಮೇಧಿ, ನಾನು ಕಂಡದಕ್ಕೆ ಲೆಕ್ಕವೇ ಇಲ್ಲ. ನನ್ನಜ್ಜಿ, ಅವಳಜ್ಜಿ, ಹೀಗೆ ತಲೆಮಾರುಗಳಿಂದ ನಾವೂ ನೀನು ಕಂಡ ಕನಸನ್ನು ಕಂಡಿದ್ದೇವೆ.

ಮಗಳೇ ಮೇಧಿ! ಆ ಕಾಲದಲ್ಲಿ ಕಾಡನ್ನು ನಾವು ಹಂಚಿಕೊಂಡು ಉಂಡೆವು.
ಅದು ಯಾರ ಸ್ವತ್ತೂ ಅಲ್ಲ, ಒಬ್ಬರ ಆಸ್ತಿಯೂ ಆಗಿರಲಿಲ್ಲ.

ಕೆಂದು ಬಾಳೆಯ ಹಣ್ಣುಗಳು ನಮ್ಮ ಮೊಣಕೈ ಉದ್ದ ಬೆಳೀತಿತ್ತು.
ಹಾನಿಮಾಡುವ  ರಾಸಾಯನಿಕಗಳು, ಗೊಬ್ಬರದ ಮಾತೇ ಇಲ್ಲ.

ನಾವು ಬೆಳೆಗೆ ಆರೈಕೆ ಮಾಡಿದೆವು. ಕಾಡನ್ನು ನೋಡಿಕೊಂಡೆವು.
ವರ್ಷ ಬಿಟ್ಟು ವರ್ಷ ನಾವು ಮಣ್ಣಿಗೆ ವಿಶ್ರಾಂತಿ ನೀಡಿದೆವು.

ಅವ್ವಾ, ಅಂದು ನಿಮಗೆ ಉಣ್ಣಲು ಬೇಕಾದಷ್ಟು ಆಹಾರ ಹುಟ್ಟುತಿತ್ತಾ?


ಮೇಧಿ ಮಗಳೆ! ಬೇಕಾದಷ್ಟು.
ಪ್ರಾಣಿ ಪಕ್ಷಿಗಳಿಗೂ ಹೊಟ್ಟೆತುಂಬುವಷ್ಟು ಆಹಾರವಿತ್ತು!
ನಮಗೆ ಅಗತ್ಯವಿರುವಷ್ಟು ಆಹಾರವನ್ನು ಇಟ್ಟುಕೊಂಡು ಎಲ್ಲವನ್ನು ಹಂಚಿಕೊಳ್ಳುತ್ತಿದ್ದೆವು.





ಅವ್ವಾ, ನಮ್ಮ ಕಾಡುಗಳು ನಮಗೆ ಸಿಕ್ಕಿದ ವರ.
ಯಾರಾದರೊಬ್ಬರು ನಮ್ಮಲ್ಲಿ ಉಷಾರು ತಪ್ಪಿದಾಗ
ಕೂಡ ಕಾಡು ಸಹಾಯ ಮಾಡುವುದೆ?

ಓ ಮೇಧಿ! ಕಾಡಿನಲ್ಲಿ ನಮಗೆ ಆರೋಗ್ಯದ ಗುಟ್ಟುಗಳು,
ನಮ್ಮ ಹಿರಿಯರು ಹೇಳಿಕೊಟ್ಟ ಸಾಂತ್ವನ ಮತ್ತು ಪರಿಹಾರಗಳು ಸಿಗುತ್ತದೆ.
ನೀನು ಇದೆಲ್ಲವನ್ನು ಕಂಡದ್ದು ನಿನ್ನ ಕನಸಿನಲ್ಲಿ ಎಂದು ನೆನಪಿದೆ ತಾನೆ?
ಬಾ ಅಷ್ಟು ದೂರ ಒಟ್ಟಿಗೆ ನಡೆಯೋಣ! ಕೆಮ್ಮು, ಜ್ವರ,
ಗಾಯಕ್ಕೆ ಔಷಧಿ ತೋರಿಸುತ್ತೇನೆ!



ಕಾಡಿನ ಒಡಲಲ್ಲಿ ಮತ್ತೇನೇನಿದೆ, ಅವ್ವಾ!

ಓ ಮೇಧಿ, ನಾವು ಮಾತಾಡುವ ಪದಗಳು,
ನಾವು ಗುನುಗುವ ಹಾಡುಗಳು, ನಾವು ತಲೆ ಬಾಗುವ
ದಿವ್ಯಶಕ್ತಿಗಳು. ಕೆಲವರು ಇದನ್ನು “ಸಂಸ್ಕೃತಿ” ಎಂದರೆ
ನಮಗಿದು ಕೇವಲ “ಕಾಡು” ಮಾತ್ರ, ಮಗಳೇ.

ಆದರೆ, ಅವ್ವಾ,  ಬದುಕು ಈಗ ಅದೆಷ್ಟು ಬದಲಾಗಿದೆ. ದಯವಿಟ್ಟು ಹೇಳು,
ಯಾಕೆ, ಯಾವಾಗ ಹೇಗೆ ಆಯಿತು?

ನಾವು ಕಾಡಿನ ಒಡಲಿನಲ್ಲಿ ಸ್ವಚ್ಛಂದವಾಗಿ ಶಾಂತಿಯಿಂದ ಬದುಕಿದ್ದೆವು.
ಆದರೆ ಆಂಗ್ಲರು ನಿಯಂತ್ರಣಕ್ಕೆ ತೆಗೆದುಕೊಂಡರು,
ಹೊರಗಿನಿಂದ ಬಂದು ಸೇರಿಕೊಂಡ ಜನ. ವಸಾಹತುಗಾರರು,
ಒಪ್ಪಂದಗಳ ಮೂಲಕ ನಮ್ಮನ್ನು ಕಟ್ಟಿಹಾಕಿ ಬಿಟ್ಟರು.

ಕಾಡು ನಮಗೆ ಜನ್ಮ ನೀಡಿದ ತಾಯಿಯಂತೆ ಕಂಡರೆ,
ಅವರಿಗದು ಮರದ ನಾಟಾ.
ದುಡ್ಡು ಮಾಡುವ ವ್ಯಸನ.





ಮೇಧಿ, ಅವರು ನಕ್ಷೆಗಳನ್ನು ರಚಿಸಿದರು, ಕಾನೂನುಗಳನ್ನು ಮಾಡಿದರು, ತೆರಿಗೆಗಳನ್ನು ವಿಧಿಸಿದರು. ನಮಗೆ ಅರಿವಿಗೆ ಬರುವ ಮೊದಲೇ ನಮ್ಮ ನೆಲೆಯನ್ನು ಅವರು ತಮ್ಮ ಆಸ್ತಿಯೆಂದು ಘೋಷಿಸಿಕೊಂಡರು. ಕಾಡನ್ನು ಕಡಿದು ಹೊರಗಿನಿಂದ ತಂದ ಮರಗಳನ್ನು ನೆಟ್ಟರು. “ಅರಣ್ಯ ಇಲಾಖೆ”ಯನ್ನು ರಚಿಸಿ, ಅರಣ್ಯ ರಕ್ಷಕರ ಸೈನ್ಯವನ್ನು ಹುಟ್ಟುಹಾಕಿದರು. ನಮ್ಮನ್ನು ನಿರ್ಭಂಧಿಸಿ, ನಮ್ಮ ಉರುವಲು, ಹಣ್ಣು, ಭೇಟೆ ಎಲ್ಲವನ್ನು ನಿಷೇಧಿಸಿದರು.




ಕೀಟಗಳು ರೋಧಿಸಿದವು, ನೀರು ಅತ್ತಿತು,
ನಾವೂ ಅತ್ತೆವು.

ಓ, ನಿನಗೆ ನೋವಿನ ಅನುಭವವಾಗುತ್ತಿದೆಯಾ ಮೇಧಿ?






ಚಿನ್ನೂ, ನೋವು ನಮ್ಮ ದೇಹದಲ್ಲಿ ಹರಿಯುತ್ತದೆ.
ಆ ತೊರೆಯಲ್ಲೂ ಅದೇ ನೋವು ಹರಿಯುತ್ತದೆ. ಈ ನೋವು
ನೆಲದಿಂದ ಬುಗ್ಗೆಯೊಡೆದು ನಮ್ಮ ನರಗ್ರಂಥಿಗಳ ಮೂಲಕ ಸಾಗುತ್ತದೆ.


ಅವ್ವಾ, ಗೊತ್ತಾಯ್ತು ಬಿಡು. ನಾವು ತಿರುಗಿ ಬೀಳಬೇಕಾಗಿತ್ತು!
ನಿರಂತರ ಆಕ್ರಮಣ ನಡೆಯುತ್ತಿರುವಾಗ ಸುಮ್ಮನೆ ಕೂಡುವುದೆಂದರೇನು?
ಮೇಧಿ ಮಗಳೇ,
ನೀನು ಹೇಳುತ್ತಿರುವುದು ಅಕ್ಷರಶ: ನಿಜ.
ಆದಿವಾಸಿಗಳು ಪ್ರತಿಭಟನೆಗಳನ್ನು ಸಂಘಟಿಸಿದರು ಕೂಡ.




ಇದ್ಯಾಕೆ ನಾವು ಈ ಕಾಫಿ, ಟೀ ಕೀಳುವುದು? ಯಾರಿಗಾಗಿ?
ನಮ್ಮ ಪಾಡಿಗೆ ಆಹಾರ ಬೆಳೆದುಕೊಂಡು ನೆಮ್ಮದಿಯಾಗಿದ್ದೆವು.
ನಾವು ಈಗ ಈ ಎಸ್ಟೇಟ್‌ಗಳಲ್ಲಿ ದುಡಿಯುವ
ನತದೃಷ್ಟ ಭೂರಹಿತರು. ನಮ್ಮ ದೇಹಗಳೋ–
ಅವು ಸೊರಗಿ ಕಂಗೆಟ್ಟಿವೆ.
ಅವರಲ್ಲಿ ಹಣ ಮತ್ತು ದುರಾಸೆಯೇ ತುಂಬಿ ಕೊಂಡಿದೆ.
ಇದು ಸರಿಯಿಲ್ಲ. ನಾವು ಒಗ್ಗೂಡಬೇಕು.
ಇದರಿಂದ ಮುಕ್ತರಾಗುವವರೆಗೆ ಹೋರಾಡಬೇಕು.



ಅವ್ವಾ, ಈ ಹೋರಾಟದಿಂದ ನಮ್ಮ ನೆಲ, ನಮ್ಮ ಹಕ್ಕಿನ
ಬೇಡಿಕೆಗಳಿಗೆ ಮನ್ನಣೆ ಸಿಕ್ಕಿತಾ?


ಮೇಧಿ, ಬಂಗಾರಿ, ನಾವು ಪಾರಂಪರಿಕ ಆಯುಧಗಳನ್ನು
ಹಿಡಿದುಕೊಂಡು ಧೈರ್ಯದಿಂದ ಕಾದಾಡಿ ಸ್ವಲ್ಪ ನೆಲವನ್ನು
ಮತ್ತೆ ನಮ್ಮದಾಗಿಸಿಕೊಂಡೆವು. ಸೂಚಿತ ಪ್ರದೇಶಗಳೆಂದು
ಅದು ನಮ್ಮ ಕೈಯಲ್ಲಿ ಉಳಿದುಕೊಂಡಿತು.

ಉಳಿದ ಭಾಗದ ನೆಲವನ್ನು ಹೊಸ ಮೀಸಲು ಅರಣ್ಯವೆಂದು
ಘೋಷಿಸಿ, ಅಲ್ಲಿ ಬಿಟ್ಟು – ಬೆಳೆವ ನಮ್ಮನ್ನು ಕ್ರಿಮಿನಲ್‌ಗಳು
ಎಂದು ಕರೆದರು, ಕಾನೂನು ಭಂಜಕರೆಂದು ಹಣೆಪಟ್ಟಿ ಕಟ್ಟಿದರು.

ನಮ್ಮ ಹಕ್ಕನ್ನು ಕಿತ್ತುಕೊಂಡು, ಬದಲಿಗೆ ದಯಾಭಿಕ್ಷೆಯನ್ನು ನೀಡಲಾಯ್ತು.
ನಮ್ಮನ್ನು ಕಾಪಾಡಲು ಹೊರಗಿನ ಜನ ಮಿಶನರಿಗಳಂತೆ ಧಾವಿಸಿ ಬಂದರು.




ನಮ್ಮ ಜಗತ್ತು ಬದಲಾಗಿ ಹೋಯ್ತು–
ನಮ್ಮ ಹಿರಿಯರು ಮೊದಲೇ ಎಚ್ಚರಿಸಿದಂತೆ ಅದೋ
ಬಂತು ಶಾಲೆಗಳು, ಆಸ್ಪತ್ರೆಗಳು, ದಾನ ದತ್ತಿಗಳು. . .




ಬ್ರಿಟಿಷರು ತೊಲಗಿದರು.
ಆದರೆ ಅವರು ಬಿಟ್ಟು ಹೋದ ವ್ಯವಸ್ಥೆ ಉಳಿದುಕೊಂಡಿತು.
ಆದಿವಾಸಿಗಳ ಪಾಲಿಗೆ ಸಿಕ್ಕಿದ ಸ್ವಾತಂತ್ರ್ಯ ಯಾವುದೇ ವ್ಯತ್ಯಾಸ ತರಲಿಲ್ಲ.
ಅದೇ ಅರಣ್ಯ ಇಲಾಖೆ. ಅವೇ ಅರಣ್ಯ ಕಾಯಿದೆಗಳು.
ಆದರೂ ನಮಗೆ ಸೇರಿದ್ದು ಎಷ್ಟು ಏನು ಎಂದು ಚರಿತ್ರೆಯಿಂದ
ನಾವು ಅರಿತುಕೊಂಡಿದ್ದೇವೆ.






ಮೇಧಿ, ನಿನ್ನ ಕನಸಿನಲ್ಲಿ ಹುಲಿಯನ್ನು ಕಂಡೆಯಾ?
ಈಗ ಅವೂ ವಿರಳವಾಗಿವೆ. ಕೆಲವೇ ಕೆಲವು ಉಳಿದುಕೊಂಡಿವೆ.
ಕೈಗಾರಿಕೆಗಳು ಅವುಗಳ ಕಾಡಿನ ಮನೆಯನ್ನು ನಾಶ ಮಾಡಿದವು.
ಓಡಿ ಹೋಗುವುದನ್ನು ಬಿಟ್ಟು ಅವುಗಳಿಗೆ ಬೇರಾವ ದಾರಿಯಿತ್ತು?

ಅದಾದ ನಂತರ ಸರಕಾರ ಏನನ್ನು ಮಾಡಲು ಮುಂದಾಯಿತು?
ಈ ಹುಚ್ಚುತನಕ್ಕೆ ಕೊನೆಯೆಲ್ಲಿ? ಕಾಡಿನ ಜೀವಿಗಳಿಗೆ
ಆದಿವಾಸಿಗಳು ಕಂಟಕ ಎಂದು ಹೇಳಿ, ನಮ್ಮನ್ನೂ ಕಾಡಿನಿಂದ,
ನಮ್ಮ ಮನೆಯಿಂದ, ಆಚೆಗೆ ಕಿತ್ತೆಸೆಯಲಾಯ್ತು.


ಅಭಿವೃದ್ಧಿಯ ಹೆಸರಲ್ಲಿ ಅವರು ಮತ್ತಷ್ಟು ಕಿತ್ತುಕೊಂಡರು.
ಅಣೆಕಟ್ಟು, ಗಣಿಗಾರಿಕೆ, ಭೂ ಸ್ವಾಧೀನಗಳೆಲ್ಲ ಶುರುವಿಟ್ಟುಕೊಂಡಿತು.
TATA:
LAND ACQUIRED FOR MINING
சுரங்கத்திற்காக
கையகப்படுத்தப்பட்ட நிலம்
TATA
LAND ACQUIRED FOR DAM
அணைக்கு
கையகப்படுத்தப்பட்ட நிலம்
TATA
ನಿಮ್ಮನ್ನು ಕಾಡಿನಿಂದ ಹೊರಹಾಕಲು ಸರಕಾರದ ಆದೇಶವಿದೆ.
ಅಯ್ಯೋ! ಅವ್ವಾ ಯಾರು ಈ ನಿರ್ಧಾರಗಳನ್ನು ತೆಗೆದುಕೊಂಡವರು?




ಮೇಧಿ, ಯಾವಾಗ ರಾಜಕಾರಣಿಗಳು ನಮ್ಮನ್ನು ರಕ್ಷಿಸಲು ವಿಫಲರಾದರೂ, ಸರಕಾರೇತರ ಸಂಸ್ಥೆಗಳು – ಎನ್.ಜಿ.ಓ ಗಳು ಬಂದು ಸೇರಿಕೊಂಡವು. ದೇವರಿಗೆ ಪ್ರೀತಿ, ಅವರು ನಮ್ಮ ವಿಶ್ವಾಸ ಮೆಚ್ಚುಗೆಯನ್ನು ಗಳಿಸುವುದು ಸಾಧ್ಯವಾಗಲಿಲ್ಲ. ಅವರ ಸಮೃದ್ಧ ಸಂಪನ್ಮೂಲದ ಕುಡಿಕೆಯ ಹೊರತಾಗಿಯೂ ಮತ್ತಷ್ಟು ಭೂಮಿ ಕೈ ಜಾರಿತು.

ಅವ್ವಾ! ಇದೆಷ್ಟು ಕ್ರೂರವಾಗಿದೆ.
ಚರಿತ್ರೆಯ ಈ ವಿವರಗಳು ನಮಗೆ ಶಾಲೆಯ
ಪಾಠಗಳಲ್ಲಿ ಸಿಗುವುದಿಲ್ಲ. ನನ್ನ ವಯಸ್ಸಿಗೆ ನೀನು
ಪ್ರಕೃತಿಯ ಪಾಠಶಾಲೆಯಲ್ಲಿ ಕಲಿತೆ. ನಿನ್ನ ಅಮ್ಮ,
ಅಜ್ಜಿ, ನೆರೆಕರೆಯವರಿಂದ ಕಲಿತೆ.



ಅವ್ವಾ, ನಾವು ಇಂದು ಕಾಂಕ್ರೀಟ್ ಕಾಡುಗಳಲ್ಲಿ
ಸೆರೆಯಾಗಿದ್ದೇವೆ. ನಾವು ಓದುವ ಗಣಿತ,
ಇತಿಹಾಸಗಳೆಲ್ಲ ಅಪೂರ್ಣ. ನಾರು ಬೇರು ಔಷಧಿ,
ಮೀನು ಹಿಡಿಯುವುದನ್ನು ಕಲಿಯುವ ಹಂಬಲ!
ನಮ್ಮೆದೆಯ ತುಡಿತ ಮಿಡಿತಗಳಿಗೆ ಹೆಜ್ಜೆ ಹಾಕುದ ಆಸೆ!!

ಆದರೆ, ಅವ್ವಾ, ನನ್ನ ದೊಡ್ಡ ಕಷ್ಟ ಏನುಗೊತ್ತಾ?
ನಮ್ಮ ಭಾಷೆಗಳನ್ನು ಬಿಟ್ಟು ಇನ್ನಾವುದೋ
ಹೊರಗಿನ ಭಾಷೆಗಳಲ್ಲಿ ಪಾಠ ಮಾಡ್ತಾರೆ,
ನೋಡು. ಅದು ಭಲೇ ಕಷ್ಟ!


ಮೇಧಿ ಮಗೂ ಕೇಳು, ಭಾಷೆ ಎಂದರೆ ಎಲೆಯ ಹಾಗೆ, ನಮ್ಮ ನಂಬಿಕೆ ಗಿಡದ ಬೇರುಗಳಂತೆ. ಮರಗಳು, ಝರಿ, ಸೂರ್ಯ, ಜೇನು ನೊಣ ಮತ್ತು ಹಕ್ಕಿಗಳು ನಮ್ಮ ಗುರುಗಳು, ನಮ್ಮ ದೇವರು. ನಾವು ಇವುಗಳನ್ನು ಒಟ್ಟಾಗಿ ನೋಡುತ್ತೇವೆ. ಅವಳನ್ನು ಭೂತಾಯಿ, ಪ್ರಕೃತಿ ಮಾತೆ ಎಂದು ಕರೆಯುತ್ತೇವೆ.
ಜಾತಿ ವ್ಯವಸ್ಥೆಯಲ್ಲಿ ನೀನು ನಮ್ಮ ಮುಖಗಳನ್ನು ಕಾಣಲಾರೆ. ಹಾಗಿದ್ದೂ ಸನಾತನ ದೇವಸ್ಥಾನಗಳು, ನಮ್ಮ ಪವಿತ್ರ ಸ್ಥಳಗಳಲ್ಲಿ ತಲೆಯೆತ್ತಿ ನಿಂತಿವೆ.
ಅಲ್ಲವಾ ಅವ್ವಾ, ನಮ್ಮ ಹಾಡಿಯ ಪಕ್ಕದಲ್ಲಿ ಗಣೇಶನ ಗುಡಿ, ವಿಷ್ಣುವಿನ ದೇವಸ್ಥಾನ, ಶಿವ–ಪಾರ್ವತಿಯರ ಆರಾಧನೆ ಯಾಕೆ?
ತಾವೆಲ್ಲಾ ಒಂದೇ ಜನ ಎಂದು ತೋರಿಸಿಕೊಳ್ಳಲು ಕಾಡಿನ ಮಕ್ಕಳು ಅನುಸರಿಸುವ ಪೂಜಾ ವಿಧಿಗಳನ್ನು ಕೈ ಬಿಡಲಾಗಿದೆ. ಆದರೆ ನೆನಪಿರಲಿ ಮೇಧಿ, ಆದಿಯಿಂದ ಬಂದ ಮೂಲ ಆಚರಣೆಗಳು, ನಮ್ಮದು. ನಮ್ಮ ಪವಿತ್ರ ವನಸಂಸ್ಕೃತಿ, ಕಾಡು, ಕಾನನಗಳನ್ನು ಸಂರಕ್ಷಿಸಬೇಕು. ಅವುಗಳನ್ನು ಜತನ ಮಾಡಿದರೆ ನಾವು ಒಂದಾಗಿ ಉಳಿದುಕೊಳ್ಳುತ್ತೇವೆ.




ಅವ್ವಾ, ನಮ್ಮ ಪರಿಸ್ಥಿತಿಯನ್ನು ಸುಧಾರಿಸುವುದು ಹೇಗೆ ಎಂದು ಸ್ವಲ್ಪ ಹೇಳು. ಈ ಅಕ್ರಮ ವಲಸಿಗರ ಹಿಡಿತದಿಂದ ನಮ್ಮ ಜಾಗೆಯನ್ನು ಮುಕ್ತಗೊಳಿಸಿ ಮರುವಶ ಮಾಡಿಕೊಳ್ಳುವುದು ಹೇಗೆ? ಹೇಳು.



ಮೇಧಿ, ನಮ್ಮಲ್ಲಿ ಕೆಲವರು ಕಾಡಿನ ಅಂಚಿನಲ್ಲಿ, ಸಮುದ್ರದ ತೀರದಲ್ಲಿ ಬದುಕುತ್ತೇವೆ. ಉಳಿದವರು ಪಟ್ಟಣದ ಹೊಟ್ಟೆಯಲ್ಲಿ ಸೇರಿಕೊಂಡಿದ್ದಾರೆ. ನಮ್ಮ ವಾಸ ಎಲ್ಲೇ ಇರಲಿ, ಸಂಘರ್ಷ ಆಳ ಗರ್ಭದಲ್ಲಿ ಕೊನರುತ್ತದೆ. ನಾವು ವ್ಯಕ್ತಿಗಳಲ್ಲ ಎಂದು ಹೃದಯ ಅರಿತಿರಲಿ, ಒಟ್ಟಿಗೆ ಮುಂದಡಿಯಿಟ್ಟು ಪ್ರತಿಭಟಿಸುವುದೊಂದೇ ದಾರಿ. ಐದೂ ಬೆರಳು ಸೇರಿ ಒಂದು ಮುಷ್ಟಿಯಾಗಲಿ.




ಮೇಧಿ, 2002ರಲ್ಲಿ ಕಾಡಿನ ನಿವಾಸಿಗಳ ಸಾಮಾಜಿಕ ಸ್ಥಳಾಂತರಕ್ಕೆ ಮುಂದಾದಾಗ ಎಲ್ಲರೂ ಒಗ್ಗಟ್ಟಿನಿಂದ ಎದುರಿಸುವುದಾಯಿತು. ಹಕ್ಕುಪತ್ರ ಇಲ್ಲದವರಿಗೆ ಕಾಡಿನ ಮೇಲೆ ಹಕ್ಕಿಲ್ಲ ಎಂದು ಪರಿಸರ ಮತ್ತು ಅರಣ್ಯ ಮಂತ್ರಿಗಳು ಮಾಡಿದ ಆದೇಶ ಇದಕ್ಕೆ ಕಾರಣವಾಯಿತು.

ಲಕ್ಷಾಂತರ ಜನರು ಕಷ್ಟ ನಷ್ಟಗಳನ್ನು ಅನುಭವಿಸಿದರೂ, ನಾವು ಹಿಂದೆ ಸರಿಯಲಿಲ್ಲ. ಭಾರತದ ಉದ್ದಗಲ ನಡೆದ ನಮ್ಮ ಹೋರಾಟಕ್ಕೆ ಸಿಕ್ಕಿತು ಹೊಸ ಕಾನೂನಿನ ವಿಜಯ ಮಾಲೆ.

ಕಾನೂನು? ಹಾಗೆಂದರೇನು ಅವ್ವಾ!

ಭಾರತದ ಸಂವಿಧಾನ ಎಲ್ಲಾ ನಾಗರಿಕರಿಗೆ ಸಮಾನ ಹಕ್ಕುಗಳನ್ನು ನೀಡಿದೆ. ಕಾನೂನು ನಮಗೆ ಸಂರಕ್ಷಣೆ ನೀಡುತ್ತದೆ. ಉಲ್ಲಂಘನೆಯನ್ನು ತಡೆಯುತ್ತದೆ.

ಅರಣ್ಯ ಹಕ್ಕುಗಳ ಕಾಯಿದೆ, ಅರಣ್ಯ ವಾಸಿಗಳಾದ ನಮ್ಮನ್ನು ರಕ್ಷಿಸುತ್ತದೆ. ಅದು ಸರಕಾರ ಮತ್ತು ವಲಸಿಗರ ಎದುರು ಕಾಡನ್ನು ನೆಚ್ಚಿಕೊಂಡು ಬದುಕು ಕಟ್ಟಿಕೊಳ್ಳುವ ನಮ್ಮ ಹಕ್ಕನ್ನು ಎತ್ತಿ ಹಿಡಿಯುತ್ತದೆ.

ಭೇಟೆ ನಿಷಿದ್ಧ, ಪ್ರಾಣಿಗಳನ್ನು ಸೆರೆ ಹಿಡಿಯಬಾರದು, ಮರಗಳನ್ನು ಕಡಿಯಬಾರದು, ಮಿಕ್ಕೆಲ್ಲ ಅರಣ್ಯ ಉತ್ಪನ್ನಗಳು ನಮ್ಮ ಜೀವನ ನಿರ್ವಹಣೆಯ ಭಾಗವಾಯಿತು. ಈ ಹೊಸ ಕಾಯಿದೆಯ ಪ್ರಕಾರ.

ಔವಾ ವಾ ಅವ್ವಾ! ಯೋಚಿಸಿ ನೋಡು!
ಹಣ್ಣುಗಳು, ಬೊಂಬು, ಮೀನು, ಜೇನು ಮತ್ತು
ಉರುವಲು ಕಟ್ಟಿಗೆ ಕೂಡ. ಔಷಧಿ ನಾರು, ಬೇರು,
ಹೂವು, ಶುಂಠಿ. . ಇವೆಲ್ಲ "ಮರಗಳಲ್ಲ"





# ಅರಣ್ಯ ಹಕ್ಕುಗಳ ಕಾಯಿದೆ 2006

ಹುರ್ರಾ! ಎಲ್ಲಿಂದ ಶುರುಮಾಡೋಣ ಅವ್ವಾ!! ಅರಣ್ಯ ಹಕ್ಕುಗಳ ಕಾಯಿದೆಯ ಪ್ರಕಾರ ನಾವು ನಮ್ಮ ನ್ಯಾಯಬದ್ಧ ಹಕ್ಕನ್ನು ಚಲಾಯಿಸಬಹುದಾ?

ಮೇಧಿ, ಕಂಬಳಿ ಹುಳ ಗೊತ್ತಾ ಮಗಳೇ? ಅಹಕಾ – ಅರಣ್ಯ ಹಕ್ಕುಗಳ ಕಾಯಿದೆ ಕೂಡ ಹಾಗೇ, ಸಮುದಾಯದ ಅಧಿಕಾರ, ವ್ಯಕ್ತಿಯ ಅಧಿಕಾರ ಎರಡಕ್ಕೂ ಇದು ಅನ್ವಯಿಸುತ್ತದೆ.

1. ಮೊಟ್ಟೆ: ಮೊದಲು ಗ್ರಾಮ ಸಭೆಯನ್ನು ಕರೆಯಬೇಕು. ಹಳ್ಳಿಯ ಎಲ್ಲರೂ, ಲಿಂಗ ಮತ್ತು ವಯಸ್ಸಿನ ಭೇದವಿಲ್ಲದೆ ಸೇರುತ್ತಾರೆ. ಈಗಾಗಲೇ ಅನುಭೋಗದಲ್ಲಿರುವ ನಿವೇಶನ ಅಥವಾ ಸಮುದಾಯ ಅರಣ್ಯ ಪಾಲನೆ– ಇವುಗಳಿಗೆ ಅರ್ಜಿಯನ್ನು ಗ್ರಾಮ ಸಭೆ ಸ್ವೀಕರಿಸುತ್ತದೆ. ಆದಿವಾಸಿಗಳು ಮಾತ್ರವಲ್ಲ. ಕಾಡನ್ನು ನೆಚ್ಚಿಕೊಂಡು 75 ವರ್ಷಗಳಿಗೆ ಮೀರಿ ಬದುಕಿದ ಯಾವುದೇ ಸಮುದಾಯದವರು ಇದಕ್ಕೆ ಅರ್ಹರಾಗಿರುತ್ತಾರೆ.

2. ಕಂಬಳಿ ಹುಳ: ಸಮುದಾಯ ಹಕ್ಕಗಳನ್ನು ತಮ್ಮದಾಗಿಸಿಕೊಳ್ಳಲು ಕೆಲವು ಪ್ರಕ್ರಿಯೆಗಳಿವೆ. ಗ್ರಾಮಸಭೆ ಮೊದಲು ಸಮುದಾಯ ಅರಣ್ಯ ಸಂಪನ್ಮೂಲದ ನಕ್ಷೆ ಸಿದ್ಧಪಡಿಸುತ್ತದೆ. ನದಿಗಳು, ಸಮುದಾಯ ಅರಣ್ಯದ ಎಲ್ಲೆಗಳು, ಮರಗಳು ಎಂಬ ವರ್ಗೀಕರಣದ ಹೊರಗಿರುವ ಅರಣ್ಯ ಉತ್ಪನ್ನಗಳು.


3. ಕೋಶಾವಸ್ಥೆ: ಈ ಹಕ್ಕು ಕೋರಿಕೆಗಳನ್ನು ಸರಕಾರಕ್ಕೆ ಸಲ್ಲಿಸಿದ ತಕ್ಷಣ ಅವುಗಳು ಸಕ್ರಮಗೊಳ್ಳುತ್ತವೆ. ಆದಿವಾಸಿಗಳ ಜಮೀನಿನಲ್ಲಿ ಗ್ರಾಮ ಸಭೆಯ ಸಮ್ಮತಿಯಿಲ್ಲದೇ ಯಾವುದೇ ಯೋಜನೆಗಳನ್ನು ಕೈಗೊಳ್ಳುವಂತಿಲ್ಲ. ಇದನ್ನು ಉಪವಿಭಾಗದ ಮಟ್ಟದ ಸಮಿತಿಯಿಂದ ಆರಂಭಿಸಿ ಜಿಲ್ಲಾ ಮಟ್ಟದ ಸಮಿತಿಯವರೆಗೆ ಅನುಸರಿಸಬೇಕಾಗುತ್ತದೆ. ಎಲ್ಲಿಯವರೆಗೆ ಎಂದರೆ...



4. ಪಾತರಗಿತ್ತಿ– ಚಿಟ್ಟೆ ನಿಮ್ಮ ಹಕ್ಕು ಕೋರಿಕೆಗಳನ್ನು ಮಾನ್ಯ ಮಾಡಲಾಯ್ತು. ಈಗ ನಿಮಗೆ ಭೂಮಿ ಮತ್ತು ಸಮುದಾಯ ಅರಣ್ಯ ಹಕ್ಕು ಪತ್ರಗಳು ಲಭಿಸುತ್ತವೆ. ಈಗ ಸಮುದಾಯ ತನ್ನ ಅರಣ್ಯವನ್ನು ರಕ್ಷಿಸಿಕೊಂಡು, ಅರಣ್ಯೇತರ ಉತ್ಪನ್ನಗಳನ್ನು ನಿರ್ವಹಿಸಬಹುದು.

ಅವ್ವಾ, ಒಂದು ಹಳ್ಳಿಯೆಂದರೆ ಅಲ್ಲಿ ಹಕ್ಕು ಕೋರಿಕೆ ದಾಖಲಿಸಲು ಎಷ್ಟೊಂದು ಇರುತ್ತದೆ. ಆದರೆ ಎಲ್ಲರೂ ಒಟ್ಟು ಸೇರಿ ಮಾಡಿದಾಗ ಇದನ್ನು ಖಂಡಿತವಾಗಿಯೂ ನಿಭಾಯಿಸಬಹುದು.

ಮೇಧಿ, ಇದೊಂದು ಸುದೀರ್ಘ ಪ್ರಯಾಣ. ಮೂರು ಜನ ನಿಯೋಜಿತ ಸರಕಾರಿ ಅಧಿಕಾರಿಗಳು ನಮ್ಮ ಕಾಗದ ಪತ್ರಗಳನ್ನು ನೋಡಬೇಕು. ನಮ್ಮ ಪ್ರತಿಯೊಂದು ಪ್ರಶ್ನೆಗೂ ಸಮಂಜಸ ಉತ್ತರ ನೀಡಬೇಕು.






**ನಾನು ಎಷ್ಟು ವಿಸ್ತೀರ್ಣದ ಜಮೀನಿಗೆ ಹಕ್ಕು ಕೋರಿಕೆ ಮಂಡಿಸಬಹುದು?**

ಒಂದು ಕುಟುಂಬ ತನ್ನ ಅನುಭೋಗದಲ್ಲಿರುವ 4 ಹೆಕ್ಟೇರ್ – 10 ಎಕರೆಗೆ ಮೀರದಂತೆ, ಕಾಡಿನ ಒಳಗಿರುವ ವ್ಯವಸಾಯ ಜಮೀನಿಗೆ ಹಕ್ಕು ಕೋರಿಕೆ ಮಂಡಿಸಬಹುದು.

**ನಾನು ಜಮೀನು ಮಾರಾಟ ಮಾಡಬಹುದೆ?**

ಇಲ್ಲ, ಮಾರಾಟ ಮಾಡುವುದು ಸಾಧ್ಯವಿಲ್ಲ. ಕುಟುಂಬ ತನ್ನ ವಾರಸುದಾರ ಮಕ್ಕಳಿಗೆ ಜಮೀನು ಹಸ್ತಾಂತರ ಮಾಡಬಹುದು.

**ನನ್ನ ಗೆಳತಿ, ಅರಣ್ಯನಿವಾಸಿ, ಆದರೆ ಆದಿವಾಸಿಯಲ್ಲ. ಅವಳ ಕುಟುಂಬ ಜಮೀನು ಹಕ್ಕು ಕೋರಿಕೆ ಮಂಡಿಸಬಹುದೆ?**

ಹೌದು, ಇಸವಿ 2005ರ ಮೊದಲು ಅವರ ಮೂರು ತಲೆಮಾರುಗಳು ಅಥವಾ 75 ವರ್ಷಗಳ ಅನುಭೋಗ ಹೊಂದಿದ್ದಲ್ಲಿ ಜಮೀನಿಗೆ ಹಕ್ಕು ಕೋರಿಕೆ ಮಂಡಿಸಬಹುದು.

**ಯಾವೆಲ್ಲ ಸರಕಾರಿ ಇಲಾಖೆಗಳು ಇದರಲ್ಲಿ ಪಾಲ್ಗೊಂಡಿವೆ?**

ಕೇಂದ್ರದ ಆದಿವಾಸಿ ವ್ಯವಹಾರಗಳ ಮಂತ್ರಾಲಯ, ಅರಣ್ಯ ಹಕ್ಕುಗಳ ಕಾಯಿದೆ ನಿಯಂತ್ರಕ ಮಂತ್ರಾಲಯವಾಗಿದೆ. ರಾಜ್ಯಗಳಲ್ಲಿ ಇದು ಆಯಾ ರಾಜ್ಯದ ಆದಿವಾಸಿ ಇಲಾಖೆಗೆ ಸೇರುತ್ತದೆ. ಉಪವಿಭಾಗ ಮಟ್ಟದ ಸಮಿತಿ, ಜಿಲ್ಲಾ ಮಟ್ಟದ ಸಮಿತಿ ಮತ್ತು ರಾಜ್ಯ ಮಟ್ಟದ ಉಸ್ತುವಾರಿ ಸಮಿತಿಗಳಲ್ಲಿ, ಅರಣ್ಯ ಇಲಾಖೆ, ಆದಿವಾಸಿ ಕಲ್ಯಾಣ ಇಲಾಖೆ, ಕಂದಾಯ ಇಲಾಖೆಯ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಪಾಲ್ಗೊಳ್ಳುತ್ತಾರೆ.

**ಅರಣ್ಯ ಹಕ್ಕುಗಳ ಕಾಯಿದೆಯಲ್ಲಿನ ಉಪಯೋಗವನ್ನು ಲಿಂಗ ಭೇದವಿಲ್ಲದೆ ಪಡೆಯಬಹುದೆ?**

ಹೌದು, ಈ ಪ್ರಕ್ರಿಯೆಯಲ್ಲಿ ಲಿಂಗ ತಾರತಮ್ಯವಿರುವುದಿಲ್ಲ. ಹಿಂದೆ ಹೇಳಿದ ಸಮಿತಿಗಳಲ್ಲಿ ಮಹಿಳಾ ಪ್ರತಿನಿಧ್ಯ ಮೂರನೇ ಒಂದಕ್ಕಿಂತ ಹೆಚ್ಚಿರಬೇಕು. ಜಮೀನು ಹಕ್ಕುಪತ್ರ ಗಂಡ ಹೆಂಡತಿಯರ ಹೆಸರಲ್ಲಿ ಜಂಟಿಯಾಗಿ ಅಥವಾ ಇಬ್ಬರಲ್ಲಿ ಒಬ್ಬರ ಹೆಸರಲ್ಲಿರಬಹುದು.

**ನನ್ನ ಜಮೀನು ಹಾಲಿ ಮೀಸಲು ಅರಣ್ಯದಲ್ಲಿದ್ದರೂ ನನ್ನ ಹಕ್ಕು ಕೋರಿಕೆ ಊರ್ಜಿತವಾಗುತ್ತದೆಯೇ?**

ಹೌದು, ಹಾಲಿ ಮೀಸಲು ಅರಣ್ಯ ಕೂಡ ಇದರ ವ್ಯಾಪ್ತಿಗೆ ಬರುತ್ತದೆ. 'ಅರಣ್ಯ' ಎಂದರೆ ವಿಂಗಡಿಸದ ಅರಣ್ಯ, ರಕ್ಷಿತ ಅರಣ್ಯ, ಮೀಸಲು ಅರಣ್ಯ, ಕಂದಾಯ ಅರಣ್ಯ, ಅಭಯಾರಣ್ಯ, ರಾಷ್ಟ್ರೀಯ ಉದ್ಯಾನ ಮತ್ತು ಹುಲಿ ಮೀಸಲು ಅರಣ್ಯ – ಇವೆಲ್ಲಾ ಒಳಗೊಂಡಿವೆ.


ಮೇಧಿ, ನಿನ್ನ ಕಣ್ಣುಗಳು ಮುಚ್ಚಿಕೊಂಡಿವೆ.
ಈ ಎಲ್ಲಾ ವಿವರಗಳು, ನಿನ್ನನ್ನು ನಿದ್ದೆಗೆ ಜಾರುವಂತೆ ಮಾಡಿತು?
ಅವ್ವಾ, ಹೇಳಿದ ಪ್ರತಿಯೊಂದು ಮಾತನ್ನು ಕೇಳಿಸಿಕೊಂಡೆ. ಈಗ ನನ್ನ ಕನಸುಗಳನ್ನು ನಾನು ನೋಡಬಲ್ಲೆ. ಕಣ್ಣು ತೆರೆದು ನೋಡಬಲ್ಲೆ. ಕೊನೆಗೂ ಗತಕಾಲದ ಅನಿಷ್ಠ ವ್ಯವಸ್ಥೆಯೊಂದು ತೊಲಗಿತು! ನಾನು ಕಲಿತ ಜ್ಞಾನವನ್ನು ಎಲ್ಲರಿಗೂ ತಿಳಿಸಿ ಕೊಡಲಿದ್ದೇನೆ.
ಓ ಮೇಧಿ, ನೀನು ನನ್ನ ಹೆಮ್ಮೆ, ನೀನು ಬೆಳಕಿನಂತೆ ಹೊಳೆಯುತ್ತಿದ್ದೀಯ! ನಿನ್ನ ತಲೆಮಾರು ಈ ಹೋರಾಟದ ಮುಂಚೂಣಿಯಲ್ಲಿ ನಿಂತು ಮುನ್ನಡೆಸುತ್ತದೆ.